RNU AIR DHARWAD

**MAY 04, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಕಲಬುರಗಿ ಜೋಳ ಹಾಗೂ ಸಿರಿಧಾನ್ಯ ರೊಟ್ಟಿ:** ಅಮೆರಿಕ ಹಾಗೂ ಆಸ್ಟ್ರೇಲಿಯಾಕ್ಕೆ ರಫ್ತು.
- **ರಾಜ್ಯದ ಎಂಟು ಸರ್ಕಾರಿ ಆಸ್ಪತ್ರೆಗಳಲ್ಲಿ,** ಇಸ್ಕಾನ್ ವತಿಯಿಂದ, ರಿಯಾಯಿತಿ ದರದಲ್ಲಿ, ಪೌಷ್ಟಿಕ ಪಥ್ಯಾಹಾರ.
- **40 ವರ್ಷ ಮೇಲ್ಪಟ್ಟ ಕಾರ್ಮಿಕರಿಗೆ,** 7ನೇ ತಾರೀಖಿನಿಂದ, ಉಚಿತ ಆರೋಗ್ಯ ತಪಾಸಣೆ ಅಭಿಯಾನ.
- **ಇಂದು, ಅಗ್ನಿಶಾಮಕ ದಳದ ಸಿಬ್ಬಂದಿಯ,** ಕೊಡುಗೆ ಗೌರವಿಸುವ ದಿನ.

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಪುರಸ್ಕೃತ,** ಪ್ರಧಾನಮಂತ್ರಿ ಕಿರು ಆಹಾರ ಉದ್ದಿಮೆಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ – ಪಿ.ಎಂ.ಎಫ್.ಎಂ.ಇ. ಹಾಗೂ ರಾಜ್ಯ ಸರ್ಕಾರದ, ಪರ್ಯಾಯ ಕೃಷಿ ಯೋಜನೆ ಅಡಿ, ಕಲಬುರಗಿ ಜಿಲ್ಲೆಯ, ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರಿಗೆ, ಶೇಕಡ 50 ರಷ್ಟು ಸಬ್ಸಿಡಿ ಸಾಲ ಯೋಜನೆ ಮೂಲಕ, ಕೃಷಿ ಇಲಾಖೆ, ರೊಟ್ಟಿ ಉದ್ಯಮ ಆರಂಭಿಸಲು, ಸಹಾಯ ಹಾಗೂ ಮಾರ್ಗದರ್ಶನ ಒದಗಿಸಿದೆ. ಈಗ ವಿದೇಶಗಳಿಗೂ ರಫ್ತಾಗುತ್ತಿರುವ, ಬ್ರ್ಯಾಂಡ್ ಕಲಬುರಗಿ, ಜೋಳದ ರೊಟ್ಟಿ, ಸಿರಿಧಾನ್ಯದ ರಾಗಿ ಹಾಗೂ ಸಜ್ಜೆ ರೊಟ್ಟಿ ಕುರಿತು, ಒಂದು ವರದಿ..

<><><>

***ಕಲಬುರಗಿ ಜಿಲ್ಲೆಯ ಕೃಷಿಕ ಹಾಗೂ ಇತರೆ ಉದ್ಯಮಶೀಲ ಮಹಿಳೆಯರನ್ನು ಒಳಗೊಂಡ, ವಿವಿಧ ಸ್ವಸಹಾಯ ಸಂಘಗಳಿಗೆ, ಕೃಷಿ ಇಲಾಖೆ, ಸ್ವಯಂ ಉದ್ಯೋಗ ಕಂಡುಕೊಂಡು, ಸ್ವಾವಲಂಬಿಯಾಗಿ, ಇತರರಿಗೆ ಉದ್ಯೋಗ ಒದಗಿಸಿಕೊಡಲು, ತರಬೇತಿ, ಮಾರ್ಗದರ್ಶನ, ಹಣಕಾಸು ಸಹಾಯ ಹಾಗೂ ಮಾರುಕಟ್ಟೆ ನಿರ್ವಹಣೆ ಕಾರ್ಯಾಗಾರ ಆಯೋಜಿಸಿ, ಯೋಜಿತ ಪ್ರಯತ್ನ ಮಾಡಿದೆ. ಕಲಬುರಗಿ ರೊಟ್ಟಿ ಹೆಸರಿನಲ್ಲಿ, ಬ್ರ್ಯಾಂಡ್ ಕೂಡ ಸಿದ್ಧವಾಗಿದೆ. ಜೋಳ ಹಾಗೂ ಸಿರಿಧಾನ್ಯಗಳ ರೊಟ್ಟಿಗಳನ್ನು***

***ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿ, ಸ್ವಂತ ಜಾಲತಾಣ ಹಾಗೂ ಆನ್ಲೈನ್ ಮಾರಾಟ ವೇದಿಕೆಗಳಲ್ಲಿ, ರಾಜ್ಯಾದ್ಯಂತ ಬೇಡಿಕೆ ಸೃಷ್ಟಿಸಿಕೊಂಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಈ ಪ್ರಯತ್ನದ ಕುರಿತು, ಮಾಹಿತಿ ನೀಡಿದ್ದಾರೆ, ಕೃಷಿ ಇಲಾಖೆ, ಕಲಬುರಗಿ ವಿಭಾಗದ ಜಂಟಿ ನಿರ್ದೇಶಕ, ಸಮದ್ ಪಟೇಲ.***

<><><>

**ಇಸ್ಕಾನ್ ಸಹಯೋಗದಲ್ಲಿ,**ರಾಜ್ಯದ ಎಂಟು ಸರ್ಕಾರಿ ಆಸ್ಪತ್ರೆಗಳಲ್ಲಿ, ಗುಣಮಟ್ಟದ ಪೌಷ್ಟಿಕ ಆಹಾರವನ್ನು, ರಿಯಾಯಿತಿ ದರದಲ್ಲಿ ವಿತರಿಸಲು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯೋಜಿಸಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾಗುವ ಆರೋಗ್ಯಾಕಾಂಕ್ಷಿಗಳಿಗೆ, ಪೌಷ್ಟಿಕ ಆಹಾರ ಒದಗಿಸಲು, ಇಸ್ಕಾನ್ ಸಂಸ್ಥೆ, ಕಳೆದ ಜನವರಿ ತಿಂಗಳಿನಿಂದ, ಉಪಾಹಾರ ವಿತರಣಾ ಯೋಜನೆ ಜಾರಿಗೊಳಿಸಿದೆ. ಧಾರವಾಡ ಹಾಗೂ ಮಂಗಳೂರು ಜಿಲ್ಲಾಸ್ಪತ್ರೆಗಳನ್ನು ಒಳಗೊಂಡು, ಬೆಂಗಳೂರಿನ ಆರು ಸರ್ಕಾರಿ ಆಸ್ಪತ್ರೆಗಳಲ್ಲಿ, ಪಥ್ಯಾಹಾರ ಪದ್ಧತಿ ಅನ್ವಯ, ಈ ಯೋಜನೆ ಆರಂಭವಾಗಿದೆ. ರಾಜ್ಯ ಸರ್ಕಾರ, ಇಸ್ಕಾನ್ ಸಂಸ್ಥೆಗೆ, 14 ಕೋಟಿ 23 ಸಾವಿರದ 800 ರೂಪಾಯಿ ಅನುದಾನ ಮಂಜೂರು ಮಾಡಿದೆ. ರಾಜ್ಯದ ಮತ್ತಷ್ಟು ಸರ್ಕಾರಿ ಆಸ್ಪತ್ರೆಗಳಿಗೆ ವಿಸ್ತರಿಸಲು, ಯೋಜಿಸಲಾಗಿದೆ.

<><><>

**ಹೊಸ ಕಾರ್ಮಿಕ ಸಂಹಿತೆ ಅಡಿ,** 40 ವರ್ಷ ಮೇಲ್ಪಟ್ಟ, ಕಾರ್ಮಿಕರಿಗಾಗಿ ಮೇ 7ರಿಂದ, ದೇಶಾದ್ಯಂತ ಉಚಿತ ಆರೋಗ್ಯ ತಪಾಸಣೆ ಅಭಿಯಾನ ಪ್ರಾರಂಭಿಸಲಾಗುವುದು ಎಂದು, ಕೇಂದ್ರ ಕಾರ್ಮಿಕ ಖಾತೆ ಸಚಿವ, ಡಾಕ್ಟರ್ ಮನ್ಸುಖ್ ಮಾಂಡವೀಯ, ಪ್ರಕಟಿಸಿದ್ದಾರೆ. ದೊಡ್ಡಬಳ್ಳಾಪುರದಲ್ಲಿ, ನೂತನವಾಗಿ ನಿರ್ಮಿಸಲಾದ, 100 ಹಾಸಿಗೆಗಳ ಕಾರ್ಮಿಕರ ವಿಮಾ ನಿಗಮದ ಆಸ್ಪತ್ರೆ ಉದ್ಘಾಟಿಸಿ, ಬಳ್ಳಾರಿಯಲ್ಲಿ ನೂತನವಾಗಿ ನಿರ್ಮಾಣವಾಗಲಿರುವ, 150 ಕೋಟಿ ರೂಪಾಯಿ ವೆಚ್ಚದ, 5 ಎಕರೆ ವಿಸ್ತೀರ್ಣದ, 100 ಹಾಸಿಗೆಗಳ, ಇ.ಎಸ್.ಐ.ಸಿ. ಆಸ್ಪತ್ರೆಗೆ, ವರ್ಚುವಲ್ ವೇದಿಕೆ ಮೂಲಕ, ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು. ದೇಶದ ಶ್ರಮಿಕ ವರ್ಗ, ರಾಷ್ಟ್ರ ನಿರ್ಮಾಣದ ನೈಜ ಶಿಲ್ಪಿಗಳು ಮತ್ತು ನಮ್ಮ ಪಾಲಿನ ವಿಶ್ವಕರ್ಮರು. ಅವರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆ, ಸರ್ಕಾರದ ಆದ್ಯತೆ ಎಂದರು.

<><><>

**ಆಸ್ಪತ್ರೆಗಳಲ್ಲಿ, ಬೆಂಕಿಯ ಅಪಾಯ ತಡೆಗಟ್ಟುವ** ನಿಟ್ಟಿನಲ್ಲಿ, ಜನ ಜಾಗೃತಿ ಮೂಡಿಸಲು, ಇಂದಿನಿಂದ, 'ಅಗ್ನಿ ಸುರಕ್ಷತಾ ಸಪ್ತಾಹ'ವನ್ನು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ದೇಶಾದ್ಯಂತ ಆಯೋಜಿಸಿದೆ. ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ, ಪುಣ್ಯಸಲೀಲಾ ಶ್ರೀವಾಸ್ತವ, ಹೊಸ ದಿಲ್ಲಿಯ, ಕರ್ತವ್ಯ ಭವನದಲ್ಲಿ, ಇಂದು ಬೆಳಗ್ಗೆ ಚಾಲನೆ ನೀಡಿ, ಆರೋಗ್ಯ ಸೌಲಭ್ಯಗಳಲ್ಲಿ ಅಗ್ನಿ ಸುರಕ್ಷತೆಯ, ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ.

<><><>

**ಇತರರನ್ನು ರಕ್ಷಿಸಲು,** ತಮ್ಮ ಪ್ರಾಣವನ್ನೇ ಪಣಕ್ಕಿಡುವ, ಅಗ್ನಿಶಾಮಕ ದಳದ ಸಿಬ್ಬಂದಿಯ, ಶೌರ್ಯ, ಬದ್ಧತೆ ಮತ್ತು ತ್ಯಾಗಗಳನ್ನು ಗೌರವಿಸುವ ದಿನವಿಂದು. ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ, ಪರಮೋಚ್ಛ ತ್ಯಾಗಗೈದ, ಅಗ್ನಿಶಾಮಕ ದಳದ ಹುತಾತ್ಮರನ್ನು ಸ್ಮರಿಸಿ, ಗೌರವಾರ್ಪಿಸುವ ದಿನ. ಅಗ್ನಿ ಅವಘಡ, ದುರ್ಘಟನೆ, ತುರ್ತು ಸಂದರ್ಭ, ವನ್ಯಪ್ರಾಣಿಗಳು ಜನವಸತಿ ಪ್ರದೇಶಕ್ಕೆ ನುಗ್ಗಿದಾಗ, ಹಗಲಿರುಳು ಎನ್ನದೇ ರಕ್ಷಿಸುತ್ತಿರುವ, ಅಗ್ನಿಶಾಮಕ ದಳಕ್ಕೆ, ಸಾರ್ವಜನಿಕರು ಬೆಂಬಲ ಮತ್ತು ಮೆಚ್ಚುಗೆಯನ್ನು ಸೂಚಿಸಲು, ಮೀಸಲಾದ ದಿನ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ಇಂದು, ನೀಲಿ ಮತ್ತು ಕೆಂಪು ರಿಬ್ಬನ್‌ಗಳನ್ನು ಒಟ್ಟಿಗೆ ಪಿನ್ ಮಾಡಿ, ಹೆಮ್ಮೆಯಿಂದ ಧರಿಸಿ, ಹುತಾತ್ಮರ ಸ್ಮಾರಕಕ್ಕೆ ಶ್ರದ್ಧಾಂಜಲಿ ಹಾಗೂ ಅಗ್ನಿಶಾಮಕ ದಳದವರಿಗೆ, ಕೃತಜ್ಞತೆ ಸೂಚಿಸುವ ಕಾರ್ಯಕ್ರಮ ಏರ್ಪಾಡಾಗಿವೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯ,** ಕೇಂದ್ರ ನೀತಿ ಆಯೋಗದ, ಪೂರ್ಣಾವಧಿ ಸದಸ್ಯರಾಗಿ, ಮೈಸೂರಿನ, ಹೆಗ್ಗಡದೇವನಕೋಟೆ ಬಳಿಯ, ಸರಗೂರಿನ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ, ಕನ್ನಡಿಗ ಡಾಕ್ಟರ್ ಆರ್. ಬಾಲಸುಬ್ರಹ್ಮಣ್ಯಂ ಹಾಗೂ ಹಿಂದಿ ಸಾಹಿತಿ, ನಿಯಿಷಿ ಸಂಸ್ಕೃತಿಯ ಹಾಗೂ ಸಮುದಾಯದ ಪ್ರತಿನಿಧಿ, ಅರುಣಾಚಲ ಪ್ರದೇಶದ ಡಾಕ್ಟರ್ ಜೋರಾಮ್ ಅನಿಯಾ ತಾನಾ ನೇಮಕಗೊಂಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ನೆಲಮೂಲ ಅನುಭವದ ತಜ್ಞತೆಯುಳ್ಳ, ಉಭಯರನ್ನು, ಎಕ್ಸ್ ಮಾಧ್ಯಮದಲ್ಲಿ ಅಭಿನಂದಿಸಿ, ಶುಭ ಕೋರಿದ್ದಾರೆ. ಡಾಕ್ಟರ್ ಆರ್. ಬಾಲು, ಈ ಮೊದಲು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ, ಸಾಮರ್ಥ್ಯ ಅಭಿವೃದ್ಧಿ ಆಯೋಗದ ತಜ್ಞ ಸದಸ್ಯರಾಗಿ, ಕಾರ್ಯನಿರ್ವಹಿಸಿದ್ದಾರೆ.

<><><>

**ಪ್ರದೇಶ ಸಮಾಚಾರಕ್ಕಾಗಿ,** ಡಾಕ್ಟರ್ ಆರ್. ಬಾಲಸುಬ್ರಹ್ಮಣ್ಯಂ, ಹೊಸ ದಿಲ್ಲಿಯಿಂದ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ** ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ, ಮತ ಎಣಿಕೆ ಕಾರ್ಯ, ಇಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ಮೊದಲು ಅಂಚೆ ಮತಗಳ ಎಣಿಕೆ, ಬಳಿಕ 8.30ಕ್ಕೆ ಇಲೆಕ್ಟ್ರಾನಿಕ್ ವೋಟಿಂಗ್ ಮಷೀನ್ ಮತಗಳ ಎಣಿಕೆ, ನಡೆಯಲಿದೆ. ಇಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ, ಉಪ ಚುನಾವಣೆ ಫಲಿತಾಂಶ ಲಭ್ಯವಾಗುವ ನಿರೀಕ್ಷೆ ಇದೆ.

<><><>

**ದಾವಣಗೆರೆ ದಕ್ಷಿಣ ಕ್ಷೇತ್ರದ ಮತ ಎಣಿಕೆ,** ನಗರದ ಡಿ.ಆರ್.ಆರ್. ವಿದ್ಯಾ ಸಂಸ್ಥೆಯಲ್ಲಿ ಹಾಗೂ ಬಾಗಲಕೋಟೆ ಕ್ಷೇತ್ರದ ಮತಗಳ ಎಣಿಕೆ, ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ, ಜರುಗುತ್ತಿದೆ.

<><><>

**ಗದಗ, ತೋಂಟದಾರ್ಯ ಮಠದ ಜಾತ್ರೆಯಲ್ಲಿ,** ಡ್ಯಾನ್ಸಿಂಗ್ ಪ್ಲೇಯರ್‌ನ ಎರಡು ಬೋಗಿಗಳು, ನಿನ್ನೆ ರಾತ್ರಿ ಕಳಚಿ ಬಿದ್ದ ಪರಿಣಾಮ, 18 ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು, ಗದಗ ಜಿಲ್ಲಾ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಲಾಗಿ ಎಂದು, ಜಿಲ್ಲಾ ಪೊಲೀಸ್ ವರಿ ್ಠಾಧಿಕಾರಿ ರೋಹನ ಜಗದೀಶ ತಿಳಿಸಿದ್ದಾರೆ.

<><><>

**ವಿಜಯನಗರದ ಹಂಪಿ ಕನ್ನಡ** ವಿಶ್ವವಿದ್ಯಾಲಯದ ಹೆಲಿಪ್ಯಾಡ್‌ನಲ್ಲಿ, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ಅವರಿಗೆ, ಮನವಿ ಸಲ್ಲಿಸಿದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶ, ರೈತ ಸಂಘದ ಅಧ್ಯಕ್ಷ, ಡಾಕ್ಟರ್ ಪುರು ೋತ್ತಮಗೌಡ, ಜಲಾಶಯದಲ್ಲಿ ಸಂಗ್ರಹವಾಗಿರುವ, 33 ಟಿ.ಎಂ.ಸಿ. ಅಡಿ ಹೂಳನ್ನು ತೆಗೆಸಲು, ಆದ್ಯತೆ ನೀಡುವಂತೆ ಒತ್ತಾಯಿಸಿದರು.

<><><>

**ಬಾಲ್ಯ ವಿವಾಹ ನಿ ೇಧ ಕಾಯ್ದೆ-2008,** ಅರಿವು ಕಾರ್ಯಾಗಾರ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ, ಸಾಮೂಹಿಕ ವಿವಾಹ ಆಯೋಜಕರು, ಆಮಂತ್ರಣ ಮುದ್ರಕರು, ದೇವಸ್ಥಾನಗಳ ಸಮಿತಿ ವಿಶ್ವಸ್ಥರು ಹಾಗೂ ಮೌಲ್ವಿಗಳಿಗೆ, ಬಳ್ಳಾರಿಯಲ್ಲಿ ಜರುಗಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಕಲಬುರಗಿ ಜೋಳ ಹಾಗೂ ಸಿರಿಧಾನ್ಯ ರೊಟ್ಟಿ;** ಅಮೆರಿಕ ಹಾಗೂ ಆಸ್ಟ್ರೇಲಿಯಾಕ್ಕೆ ರಫ್ತು.
- **ರಾಜ್ಯದ ಎಂಟು ಸರ್ಕಾರಿ ಆಸ್ಪತ್ರೆಗಳಲ್ಲಿ,** ಇಸ್ಕಾನ್ ವತಿಯಿಂದ, ರಿಯಾಯಿತಿ ದರದಲ್ಲಿ, ಪೌಷ್ಟಿಕ ಪಥ್ಯಾಹಾರ.
- **40 ವರ್ಷ ಮೇಲ್ಪಟ್ಟ ಕಾರ್ಮಿಕರಿಗೆ,** 7ನೇ ತಾರೀಖಿನಿಂದ, ಉಚಿತ ಆರೋಗ್ಯ ತಪಾಸಣೆ ಅಭಿಯಾನ.
- **ಇಂದು, ಅಗ್ನಿಶಾಮಕ ದಳದ ಸಿಬ್ಬಂದಿಯ,** ಕೊಡುಗೆ ಗೌರವಿಸುವ ದಿನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>